ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್‌ಕೇಸ್ ನಂಬರ್ : 21/2021**

**ಫ್ರಾಸಾ- 3 ಚಾಸಾ- 2**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನವೀನ್ |
| ತಂದೆಯ ಹೆಸರುಃ | : | ಚಂದ್ರಶೇಖರ್ |
| ವಯಸ್ಸುಃ | : | 29 ವರ್ಷ |
| ಉದ್ಯೋಗಃ | : | ಖಾಸಗಿ ಕೆಲಸ |
| ವಾಸ | : | ಹಳೇಬೀಡು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:25-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1, 3 ರಿಂದ 6ರವರ ಪರಿಚಯವಿದೆ. ಆರೋಪಿತರ ಪರಿಚಯವಿಲ್ಲ. ಹಳೇಬೀಡಿನ ಮುಬಾರಕ್ ವೆಲ್ಡಿಂಗ್ ಶಾಪ್ ಬಳಿ ನನಗೆ ಸೇರಿದ ದ್ವಿಚಕ್ರ ವಾಹನದ ಗ್ಯಾರೇಜ್ ಇರುತ್ತದೆ. ಬೆಳಿಗ್ಗೆ 9 ರಿಂದ ಸಂಜೆ 8 ಗಂಟೆ ವರೆಗೆ ಅದು ತೆರೆದಿರುತ್ತದೆ. ಮುಬಾರಕ್ ವೆಲ್ಡಿಂಗ್ ಶಾಪ್ ನಲ್ಲಿ ಎಷ್ಟು ಜನ ಕೆಲಸಕ್ಕಿದ್ದರೆಂದು ನನಗೆ ಗೊತ್ತಿಲ್ಲ. ಅಲ್ಲಿ ಅಲ್ಲಾಭಕ್ಷ್ ರವರ ಮಗ ಮುಬಾರಕ್ ಮತ್ತು ಜಫುಲ್ಲಾ ರವರ ಮಗ ಸೈಫುಲ್ಲಾ ಕೆಲಸಕ್ಕಿದ್ದರೋ ಎಂದು ನನಗೆ ಗೊತ್ತಿಲ್ಲ. ಚಾಸಾ-1 ಸ್ಥಳೀಯ, ಆದ್ದರಿಂದ ಆತ ನನಗೆ ಪರಿಚಯ.

2.ಅಂದಾಜು 5 ವರ್ಷದ ಹಿಂದೆ ಮುಬಾರಕ್ ವೆಲ್ಡಿಂಗ್ ಶಾಪ್ ಬಳಿ ಸಂಜೆ 5 - 5ವರೆ ಗಂಟೆಗೆ ಚಾಸಾ-1 ರವರಿಗೆ ಬೆಂಕಿಹಾಕಿದ್ದಾರೆಂದು ಜನರು ಸೇರಿದ್ದರು. ಆಗ ನಾನು ನನ್ನ ಗ್ಯಾರೇಜ್ ನಲ್ಲಿ ಕೆಲಸ ಮಾಡಿಕೊಂಡಿದೆದನು, ವಿಚಾರ ತಿಳಿದು ಬಂದು ನೋಡಿದಾಗ ಚಾಸಾ-1 ರವರ ಕಾಲಿಗೆ ಬೆಂಕಿ ತಗುಲಿತ್ತು. ಯಾವ ಕಾರಣಕ್ಕಾಗಿ ಬೆಂಕಿ ಹತ್ತಿಕೊಂಡಿತೆಂದು ಚಾಸಾ-1 ರಿಂದ ತಿಳಿದುಕೊಳ್ಳಲಿಲ್ಲ. ನಾನು ಬೆಂಕಿ ನಂದಿಸಲು ಪ್ರಯತ್ನಪಡಲಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ಇರುವ ರುಜು ನನ್ನದೆ. ಸದರಿ

ದಾಖಲೆಯನ್ನು ನಿಪಿ-3 ಎಂದು ಸಾಕ್ಷಿಯ ರುಜುವನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ಪೊಲೀಸರು ಸ್ಥಳಕ್ಕೆ ಮಹಜರು ಮಾಡಲು ಬಂದಾಗ ಹಾಕಿರುತ್ತೇನೆ. ಪೊಲೀಸರು ಘಟನೆ ನಡೆದಿದೆಯಾ ಎಂದು ಕೇಳಿ ಸಾಕ್ಷಿಯಾಗಿ ಸಹಿ ಹಾಕಲು ತಿಳಿಸಿದರು, ಹಾಕಿದೆನು. ನನ್ನ ಸಮಕ್ಷಮ ಇನ್ಸಿಟ್ಟರು ಸಹಿ ಹಾಕಿರುತ್ತಾರೆ. ಅಲ್ಲಿ ನನ್ನ ಸಮಕ್ಷಮ ಏನು ತೆಗೆದುಕೊಂಡಿರುತ್ತಾರೆಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 3 ನ್ನು ನಾನು ಆ ದಿವಸ ನೋಡಿರುತ್ತೇನೆ. ಇವುಗಳನ್ನು ನಾನು ಪೊಲೀಸರು ಸ್ಥಳಕ್ಕೆ ಬಂದಾಗ ನೋಡಿರುತ್ತೇನೆ. ಪೊಲೀಸರು ಗಲಾಟೆಗೆ ಸಂಬಂಧಪಟ್ಟಂತೆ ಅವುಗಳನ್ನು ತೆಗೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಚಾಸಾ-7ರವರಿಗೆ ಸೇರಿದ ಮುಬಾರಕ್ ವೆಲ್ಡಿಂಗ್ ಶಾಪ್ ನಲ್ಲಿ ಆರೋಪಿ ಮತ್ತು ಕಾ.ಸಂ.ಒ.ಬಾಲಕ ಸೈಫುಲ್ಲಾ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿ. ದಿನಾಂಕ 09.01.2020 ರಂದು ಬೆಳಿಗ್ಗೆಯಿಂದ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸಂಜೆ 5-45 ಗಂಟೆ ಸುಮಾರಿಗೆ ನಾನು ನನ್ನ ಅಂಗಡಿ ಮುಂದೆ ನಿಂತಿದ್ದೆ ಎಂದರೆ ಸರಿ. ಆಗ ಆರೋಪಿತ ಪೇಯಿಂಟ್ ಡಬ್ಬ ಹಿಡಿದುಕೊಂಡು ಡಿಸ್ಟೆಂಪರ್ ಬಣ್ಣ ಬಳಿಯುತ್ತಿದ್ದ ಎಂದರೆ ಸರಿ. ಅದೇ ಕಾಲಕ್ಕೆ ಫ್ರಾಸಾ-1 ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಎಂದರೆ ಸರಿ. ಆಗ ಆರೋಪಿತ ಏಕಾಏಕಿ ಫ್ರಾಸಾ-1ರವರ ಪ್ಯಾಂಟಿಗೆ ಬಣ್ಣ ಎರಚಿದರು ಎಂದರೆ ಸರಿ. ಆಗ ಫ್ರಾಸಾ-1 ಯಾಕೆ ಬಣ್ಣ ಎರಚಿದೆ ಎಂದು ಕೇಳಿದರು, ಆಗ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಫ್ರಾಸಾ-1ರವರನ್ನು ಉದ್ದೇಶಿಸಿ, ಹೋಗೋ ಸೂಳೆಮಗನೆ ಟಿನ್ನರ್ ಹಾಕಿ ತೊಳೆದುಕೋ ಎಂದು ಬೈದನು ಎಂದರೆ ಗೊತ್ತಿಲ್ಲ. ಆಗ ಫ್ರಾಸಾ-1 ಟಿನ್ನರ್ ಹಾಕಿಕೊಂಡು ಪ್ಯಾಂಟು ಒರೆಸುತ್ತಿದ್ದ ಎಂದರೆ ಸರಿ.ಆಗ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಇದ್ದಕ್ಕಿದ್ದಂತೆ ಬೆಂಕಿಕಡ್ಡಿ ಗೀರಿ ಫ್ರಾಸಾ-1ರವರ ಪ್ಯಾಂಟಿಗೆ ಎಸೆದರು ಎಂದರೆ ನಾನು ನೋಡಿಲ್ಲ. ಆಗ ಏಕಾಏಕಿ ಪ್ಯಾಂಟಿಗೆ ಬೆಂಕಿ ಹತ್ತಿಕೊಂಡಿತು ಎಂದರೆ

ಸಾಕ್ಷಿಯು ಬೆಂಕಿಹಚ್ಚಿಕೊಂಡಿತು, ಅವರು ಕೂಗಿಕೊಂಡರು ಎನ್ನುತ್ತಾರೆ. ಆಗ ನಾನು ಮತ್ತು ಚಾಸಾ-3 ಸೇರಿ ನೀರು ಹಾಕಿ ಬೆಂಕಿಯನ್ನು ಆರಿಸಿದೆವು ಎಂದರೆ ಸರಿಯಲ್ಲ. ನಾನು ಪ್ರಾಸಾ-1ರವರ ಪ್ಯಾಂಟು ಎತ್ತಿ ನೋಡಿದಾಗ ಎಡಗಾಲಿನ ಪಾದದಿಂದ ಮಂಡಿಯವರೆಗೆ ಸುಟ್ಟಿತ್ತು ಎಂದರೆ ನಿಜ ಹಾಗೂ ಎಡಗೈ ಬೆರಳುಗಳು ಸುಟ್ಟುಹೋಗಿದ್ದವು ಎಂದರೆ ನಾನು ನೋಡಿಲ್ಲ. ನಾನು ಮತ್ತು ಚಾಸಾ-3 ಪ್ರಾಸಾ-1ರವರನ್ನು ಹಳೇಬೀಡಿನ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಪ್ರಾಸಾ-1ರವರ ತಂದೆಗೆ ಫೋನ್ ಮುಖಾಂತರ ತಿಳಿಸಿದೆವು ಎಂದರೆ ಸರಿಯಲ್ಲ. ಪ್ರಾಸಾ-1ರವರ ತಂದೆ ಹೆಚ್ಚಿನ ಚಿಕಿತ್ಸೆಗೆ ಆತನನ್ನು ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಪ್ರಾಸಾ-1ರವರನ್ನು ಕೊಲೆ ಮಾಡುವ ಉದ್ದೇಶದಿಂದಲೇ ಬಣ್ಣ ಎರಚಿ ಟಿನ್ನರ್ ಹಾಕಿ ತೊಳೆಯಲು ಹೇಳಿ ಬೆಂಕಿ ಹಚ್ಚಿದರು ಎಂದರೆಸರಿಯಲ್ಲ. ಈ ಘಟನೆಯನ್ನು ನಾನು ಕಣ್ಣಾರೆ ಕಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಈ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿ ನಿಪಿ-4ರಂತೆ ಹೇಳಿಕೆ ನೀಡಿದ್ದರೂ, ಆರೋಪಿತನ ವೆಲ್ಡಿಂಗ್ ಶಾಪ್ ನನ್ನ ಅಂಗಡಿ ಪಕ್ಕದಲ್ಲೇ ಇರುವುದರಿಂದ ಆರೋಪಿತನಿಗೆ ಮತ್ತು ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ**

ಘಟನೆಯಾದಾಗ ಸುಮಾರು ಜನ ಸೇರಿದ್ದರು. ಘಟನೆಯ ಬಗ್ಗೆ ನನಗೇನೂ ಗೊತ್ತಿಲ್ಲ. ಬೆಂಕಿ ಹೇಗೆ ಹತ್ತಿಕೊಂಡಿತೆಂದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.ಪೊಲೀಸರು ಸಹಿ ಹಾಕಲು ಹೇಳಿದ ಕಾರಣ ಸಹಿ ಹಾಕಿದ್ದು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**